‘ಈ ಪ್ರಾಯದಲ್ಲಿ ಬೇಕಿತ್ತ ಇವರಿಗೆ ಈ ಪೋಕಾಲದ ಕಾರುಬಾರು. ಊರಲ್ಲಿ ಹೋಗುವ ಮಾರಿಯನ್ನು ಮೈಮೇಲೆ ಎಳ್ಕೊಂಡ ಹಾಗೆ ಆಗ್ಲಿಲ್ವ ಇದು!...’

ಚಾವಡಿಯ ಮೂಡುದಿಕ್ಕಿಗೆ ಮುಖ ಮಾಡಿ ಇಟ್ಟಿದ್ದ ಪಲ್ಲಂಗದ ಮೇಲೆ ಒರಗಿಕೊಂಡು ಅದೇನೋ ಯೋಚನೆ ಮಾಡುತ್ತ... ನಿಟ್ಟುಸಿರ ಮೇಲೆ ನಿಟ್ಟುಸಿರು ಬಿಡುತ್ತ... ಎದುರಿನ ಬಾಕಿಮಾರು ಗದ್ದೆ ದಿಟ್ಟಿಸುತ್ತಿದ್ದ ತನ್ನ ಗಂಡನ ನಿಡುಸುಯ್ಲಿನ ಭರವನ್ನು ಕಂಡ ಚಂದ್ರಕ್ಕೆಯವರು, ಅಡುಗೆಮನೆಯಿಂದ ಮಧ್ಯಾಹ್ನದ ಮೀನುಸಾರಿಗೆ ಮಸಾಲೆ ಅರೆಯಲು ಕಲ್ಲಿನ ತಲೆ ಹಿಡಿದು ಕೂತಿದ್ದ ತನ್ನ ಹಿರಿಸೊಸೆಗೆ ಹೇಳುತ್ತಿದ್ದ ಮಾತು– ಪಟೇಲ ದೇವಪ್ಪ ಶೆಟ್ಟರ ಕಿವಿಬೀಳಿಗೆ ತಲುಪಿತ್ತಾದರೂ ಅವರು ತುಟಿಪಿಟಿಕ್ಕೆನ್ನದೆ ಚಾವಡಿ ಬಿಟ್ಟು ಘನಗಾಂಭೀರ್ಯದಿಂದ ಓಣಿಯ ತಲೆಬಾಗಿಲಿನತ್ತ ನಡೆದಿದ್ದರು.

‘ಇದು ದೈವದ ಕೆಲಸ... ಇವತ್ತಲ್ಲ ನಾಳೆ ಯಾರಾದರೂ ಆ ದೈವವನ್ನು ಎಬ್ಬಿಸಿ ಕೂರಿಸಲೇಬೇಕಿತ್ತು. ಪಟೇಲನಾಗಿ ನಾನೇ ಮುಂದೆ ನಿಂತು ಆ ಕೆಲಸಕ್ಕೆ ತಲೆಕೊಡದಿದ್ದರೆ ನಾಳೆ ಕೇಳಿದ ಸುತ್ತಲ ನಾಲ್ಕೂರಿನವರಾದರೂ ಏನಂದಾರು! ದೈವವೂ ಯಾವ ರೀತಿ ಮುನಿದೀತು?... ಇವಳದ್ದು ಯಾವತ್ತು ಇದ್ದದ್ದೇ... ಎಲ್ಲದಕ್ಕೂ ಪೆದಂಬೇ ಮಾತು...’

ಹೀಗೆಂದು ಹೆಂಡತಿಯವರ ಮಾತಿನ ಬಗ್ಗೆ ತನಗೆ ತಾನೇ ಸಮಜಾಯಿಷಿ ನೀಡುತ್ತ ತನ್ನ ತಲೆಯೊಳಗೆ ಕೊರೆಯುತ್ತಿರುವ ‘ಸಂಪ್ರದಾಯದ ಕೀಟ’ವನ್ನು ಕೈನಾಲುಮನೆಯ ಜೋಯಿಸ ವಾಸುತಂತ್ರಿಗಳ ಕಿವಿಬೀಳಿಗೆ ಹಾಕೋಣ ಎಂದು ಅವರು ಓಣಿಯ ಬಾಯಿಯತ್ತ ನಡೆದಿದ್ದರು.

ಕೈನಾಲು ಮನೆಯ ಕಡೆ ಹೋಗಬೇಕಾದರೆ ಚಿನ್ನಾಚಾರಿಯ ಆಚಾರಿ ಕೊಟ್ಯ ದಾಟಿಯೇ ಹೋಗಬೇಕು. ಹೇಗೂ ಇಲ್ಲಿಯವರೆಗೆ ಬಂದಾಗಿದೆ; ಆಚಾರಿಯಲ್ಲಿ ದೈವದ ಗಂಟೆ ಮೊಗ, ನಗ, ಅಣಿ, ಕಟ್ಸಲೆ ಸಿದ್ಧವಾಗಿದ್ಯಾ... ಆಗದಿದ್ದರೆ ‘ಆ ಕೆಲ್ಸಕ್ಕೆ ಒಮ್ಮೆ ಬೇಗ ಕೈಹಾಕು ಮಾರಾಯ’ ಅಂತ ಎಚ್ಚರಿಸಿಯೇ ಬಿಡುವ... ಎಂದು ಅವರು ಆಚಾರಿ ಕೊಟ್ಯದತ್ತ ಬರುವಷ್ಟರಲ್ಲಿ, ದೈವದ ನಗ–ಮೊಗಗಳ ಕೆಲಸ ಮಾಡುವ ಚಿನ್ನಾಚಾರಿಯೇ ಬಿಳಿಕೊಕ್ಕರೆಯನ್ನು ಮೀರಿಸುವಂತಹ ಬಿಳಿಯ ಪಂಚೆ, ಜುಬ್ಬವನ್ನು ಏರಿಸಿಕೊಂಡು, ಎತ್ಲಾಗೋ... ಹೋಗಲು ರಾಜಬೀದಿಯತ್ತ ಹೊರಟುಬರುತ್ತಿದ್ದ. ಕಿವಿಯಲ್ಲೊಂದು ಕೆಂಪು ಹರಳಿನ ಚಿನ್ನದ ಒಂಟಿ ಹಾಕಿಕೊಂಡು ಮುಖದಲ್ಲಿ ಸದಾ ಒಂದು ಲಕ್ಷಣದ ಕಳೆ ಹೊದ್ದಿರುತ್ತಿದ್ದ ಆ ಚಿನ್ನಾಚಾರಿಯನ್ನು ಕಂಡೊಡನೆ ದೇವಪ್ಪ ಶೆಟ್ರು ಯಾಕೋ... ಸಾಕಷ್ಟು ಗೆಲುವಾದರು.